'ಹಂಗಾರ ಬ್ಯಾರೆ ವರಾ ನೋಡೂದ ಛಲೋ... ಸುಮ್ಮನ ಮನಸಿನ್ಯಾಗ ಇಟಗೊಂಡು ಕಾಯೂದು ಬ್ಯಾಡ ಅಂದಂಗಾತು.'

'ಎಂಟ ದಿವಸ ಕಾದು ನೋಡೂಣು, ಶಾಣ್ಯಾ ಡಾಕ್ಟರಗೋಳು ಏನ ಮಾಡತಾರೋ ಹೇಳಾಕ ಬರಂಗಿಲ್ಲ... ಬೀಗರೂ ಛಲೋ ಸಿಕ್ಕಾರ, ಹುಡಗನೂ ಒಳ್ಳೆಂವ ಅದಾನ...'

'ಮಗನ ಮದುವಿ?...'

'ಈ ಬ್ಯಾಸಿಗ್ಗೆ ಮಾಡಿ ಮುಗುಸೂದು.'

ಶಾರದೆಯ ಎದೆಯೊಳಗಿನ ವೇಗ ಇಡೀ ಮನೆಯನ್ನೆಲ್ಲ ವ್ಯಾಪಿಸಿ ಲಬ್‌ಡಬ್ ಹೊಡೆದುಕೊಳ್ಳತೊಡಗಿತು. ಅವನ ಮೊಬೈಲ್ ಮೇಲಿನ ಸ್ಕ್ರೀನ್ ಫೋಟೊ, ಆ ಕರಿ ಚಸ್ಮಾದ ಕೆಳಗೆ ಕಾಣುತ್ತಿದ್ದ ಹೊಳಪುಗೆನ್ನೆ, ಎರಡೂ ಕೈಯ ತೋರುಬೆರಳನ್ನು ಮೇಲೆತ್ತಿ ನಿಂತಿದ್ದ ಆ ಪೋಸು... ಆ ಉಲ್ಲಸಿತ ನಗು ಎಲ್ಲವೂ ಮತ್ತೆಮತ್ತೆ ನೆನಪಾಗತೊಡಗಿದವು. ನಾಗೊಂದಿ ಮೇಲಿಟ್ಟಿದ್ದ ಆ ಸೆಲ್‌ಫೋನ್ ಕೈಗೆತ್ತಿಕೊಂಡು ಕ್ಷಮಿಸು ನನ್ನ ಅಂತ ಬರೆಯತೊಡಗಿದಳು... ಅದ್ಯಾವ ಮಾಯಕದಲ್ಲಿ ಸೋತಳೋ ಕಣ್ಣೀರ ಹನಿಗಳು ಧಾರಾಕಾರವಾಗಿ ಹರಿದು ಮೂಗಿನ ಹೊಳ್ಳೆಗಳ ಮೇಲಿಂದ ನೆಗೆದು ಮೊಬೈಲ್ ಮೇಲೆ ಬಿದ್ದಾಗ ಬಿಕ್ಕತೊಡಗಿದ್ದಳು.

ಅಂದಾಜು ಆ ಇಡೀ ರಾತ್ರಿ ಅತ್ತಳು... ಉಗ್ಗಳಿಸಿ ಬರುವ ಬಿಕ್ಕನ್ನು ಒತ್ತೊತ್ತಿ ನೆನಪುಗಳಲ್ಲುಳಿದ ಅವನ ಆ ಸಪ್ಪೆ ಮುಖ, ತಲೆ ಕೆಳಗೆ ಹಾಕಿದ ಆ ಕ್ಷಣಗಳನ್ನು ಕಣ್ಣೀರಿನಿಂದಲೇ ಒರೆಸಿ ಹಾಕುವ ವ್ಯರ್ಥಪ್ರಯತ್ನ. ನಿದ್ದೆಯೂ ಒದ್ದಾಡಿ ಮನಸ್ಸಿನೊಂದಿಗೆ ಭಾರವಾಗುತ್ತ ಇರುಳಿನ ಅತಿಥಿಯಾಗಿ ಕಣ್ಣಳತೆ ದೂರದಲ್ಲೆ ಉಳಿದದ್ದು ಹತ್ತಿರವಾಗಲೇ ಇಲ್ಲ. ಮನಸಾರೆ ಒಪ್ಪಿಕೊಂಡವಳ ಕಣ್ಣಲ್ಲಿ ಆ ಉಲ್ಲಸಿತ ನಗು ಮತ್ತೆ ಪಡಯುವ ಹಂಬಲ ಕಾಣತೊಡಗಿತು. ತಲೆದಿಂಬಿನ ಪಕ್ಕದಲ್ಲಿಟ್ಟಿದ್ದ ಮೊಬೈಲ್ ಬೆಳಕು ಮಾಡಿ 'ಚಲತೆ... ಚಲತೆ.. ಮೇರೆ ಏ ಗೀತ ಯಾದ ರಖನಾ...' ಹಾಡು ಗುಣಗತೊಡಗಿದಾಗ ಸರೂರಾತ್ರಿಯ ಕತ್ತಲಿನ ನಡುವೆ ಅವಳ ಮುಖದಲ್ಲಿ ಗೆಲುವಿನ ನಗು ಕಾಣಿಸಿತು.

ಅತ್ತಳು... 'ಗುಣವಾಗಿ ಬೇಗ ಬಾ...' ಎಂದು ಮನಸಾರೆ ಹಾರೈಸಿದಳು... ಮಂದನಗೆಯಲ್ಲಿ ಬೆಚ್ಚಗಿನ ಕಾವು ಮೈಗೆ ತಾಗಿ ಅವನ ಸಾಮಿಪ್ಯವನ್ನು ಕಲ್ಪಿಸಿಕೊಂಡು ನಕ್ಕಳು... ಕನವರಿಕೆ ಎಂಬಂತೆ ಆ ಗೂಢ ಕತ್ತಲಿನ ನಡುವೆ ನಗೆ ಉಕ್ಕುಕ್ಕಿದಂತೆ ಪ್ರತಿಧ್ವನಿಸಿತು.

## ಮಹದೇವ ಹಡಪಡ

ಹೆಗ್ಗೋಡಿನ ನೀನಾಸಂ ಪದವೀಧರ ಮಹಾದೇವ ಅವರ ಊರು ಬೆಳಗಾವಿ ಜಿಲ್ಲೆಯ ರಾಮದುರ್ಗ. ಪ್ರಸ್ತುತ ಧಾರವಾಡದಲ್ಲಿ ವಾಸ. ಅವರು ಸುಮಾರು 20 ನಾಟಕಗಳನ್ನು ನಿರ್ದೇಶಿಸಿದ್ದಾರೆ. 'ಆಟ–ಮಾಟ' ಸಂಸ್ಥೆಯಿಂದ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಮಾಡಿರುವ ನಾಟಕಗಳ ಪ್ರದರ್ಶನಗಳು ಪ್ರೇಕ್ಷಕರ ಮೆಚ್ಚುಗೆ ಗಳಿಸಿವೆ. ಕಳೆದ 10 ವರ್ಷಗಳಿಂದ ಕತೆಗಳನ್ನು ಬರೆಯುತ್ತ ಬಂದಿದ್ದಾರೆ.